# ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ – ೨೦೦೭, ಕುವೈತ್

ಕೊಲ್ಲಿರಾಷ್ಟ್ರಗಳಲ್ಲಿ ಕುವೈತ್ ಒಂದು ಪುಟ್ಟ ಆದರೆ ಶ್ರೀಮಂತ ರಾಷ್ಟ್ರ. ಇದರ ಜನಸಂಖ್ಯೆ ಸುಮಾರು ೩೦ಲಕ್ಷ, ಇವರಲ್ಲಿ ಸುಮಾರು ೬೦೦,೦೦೦ ಭಾರತೀಯರು ಹಾಗೂ ಕರ್ನಾಟಕದಿಂದ ಬಂದಿರುವ ಜನರಸಂಖ್ಯೆ ಹತ್ತಿರ ಹತ್ತಿರ ೩೫,೦೦೦ ಇರುತ್ತದೆ. ಇಂಧನ–ತೈಲೋತ್ಪತ್ತಿಗೆ ಹೆಸರುವಾಸಿಯಾದ ಈ ರಾಷ್ಟ್ರಕ್ಕೆ ಉದ್ಯೋಗನಿಮಿತ್ತವಾಗಿ ಬಂದಿರುವ ಕನ್ನಡದ ಜನರಲ್ಲಿ ಉದ್ಯೋಗತಜ್ಞರು ಹಾಗೂ ವೈದ್ಯರೇ ಹೆಚ್ಚು. ಇವರುಗಳು ೧೯೭೩ರಿಂದಲೇ ಕುಟುಂಬ ಸಮೇತರಾಗಿ ಕುವೈತ್‌ನಲ್ಲಿ ನೆಲೆಸಿದ್ದಾರೆ.

ಈ ಕನ್ನಡಿಗರು ೧೯೮೨–೮೩ರಲ್ಲಿ ಡಾ!! ಎಂ.ಎಸ್.ತಾರಕನಾಥ್ ಎಂಬ ಸಹೃದಯರ ಮನೆಯಲ್ಲಿ ವಿಶೇಷ ಸಂದರ್ಭಗಳಲ್ಲಿ ಸೇರುತ್ತಿದ್ದುದುಂಟು. ಆಗ ಇವರುಗಳು ತಮ್ಮಲ್ಲಿ ತಾಯ್ನಾಡಿನ ಬಗ್ಗೆ ಇರುವ ತುಡಿತವನ್ನು, ಕನ್ನಡನಾಡಿನ ವಾತಾವರಣ, ಬಂಧು ಬಾಂಧವರ ನೆನಪುಗಳನ್ನು ಹಂಚಿಕೊಳ್ಳುತ್ತಿದ್ದರು. ಕನ್ನಡ ನಾಡಿನ ಸಂಸ್ಕೃತಿ, ಸಾಹಿತ್ಯ, ಕಲೆ ನೃತ್ಯಾದಿಗಳಿಂದ ವಂಚಿತರಾಗಿರುವ ತಮ್ಮ ವ್ಯಥೆಯನ್ನು ತೋಡಿಕೊಳ್ಳುತ್ತಿದ್ದರು. ಇದು ಮಾತ್ರವಲ್ಲದೆ ಹೊಸದಾಗಿ ಕನ್ನಡನಾಡಿನಿಂದ ಕುವೈತ್ ದೇಶಕ್ಕೆ ಬರುತ್ತಿದ್ದ ಜನರಿಗೆ ಭಾಷಾಸಮಸ್ಯೆ ಇರುತ್ತಿತ್ತು. ಪರಭಾಷೆ ಬಾರದೆ ಅವರ ಅನೇಕ ಕಾರ್ಯಗಳೂ ವಿಳಂಬಗೊಳ್ಳುತ್ತಿದ್ದುವು. ಈ ಎಲ್ಲಾ ಕೊರತೆಗಳನ್ನು ನೀಗಲು ಕುವೈತ್‌ನಲ್ಲಿ ಕನ್ನಡಿಗರಿಗಾಗಿ, ಕನ್ನಡಿಗರಿಂದ, ಕನ್ನಡಿಗರೇ ಒಂದು ಸಂಘ ಸ್ಥಾಪಿಸಿಕೊಳ್ಳುವ ಅಗತ್ಯ ಕಂಡಿತು. ಹೀಗಾಗಿ, ನಮ್ಮ ಈ "ಕುವೈತ್ ಕನ್ನಡ ಕೂಟ" ೧೯೮೪ ರಲ್ಲಿ ಸ್ಥಾಪನೆಗೊಂಡಿತು. ಪ್ರಾರಂಭದಲ್ಲಿ ಕೆಲವೇ ಸಂಖ್ಯೆಯ ಕುಟುಂಬಗಳನ್ನು ಹೊಂದಿದ್ದ ಕೂಟ ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೂ ವರ್ಧಿಸಿತು. ಈಗಿನ ಕುವೈತ್ ಕನ್ನಡ ಕೂಟ(ಕುಕಕೂ)ದ ಸದಸ್ಯರ ಸಂಖ್ಯೆ ೨೦೦ ಕುಟುಂಬಗಳು.

ಕುಕ ಕೂಟವೂ ಸೇರಿದಂತೆ ಕುವೈತ್ ದೇಶದಲ್ಲಿ ಕರ್ನಾಟಕ ಮೂಲದ ಇನ್ನಿತರ ೧೩ ಸಂಘಟನೆಗಳು ಇವೆ. ಈ ಸಂಘಟನೆಗಳೊಂದಿಗೆ ಕುಕಕೂ ಹಿರಿಯಕ್ಕನಂತೆ ಬಾಂಧವ್ಯ ಬೆಳೆಸಿಕೊಂಡಿದೆ. ಈ ೧೪ಕ್ಕೂ ಕೂಟಗಳು ಸೇರಿ ಕರ್ನಾಟಕ ರಾಜ್ಯದ ಹಿರಿಮೆ ಗರಿಮೆಗಳನ್ನು ಹೆಚ್ಚಿಸುತ್ತಲಿವೆ. ಕುವೈತ್ ಮತ್ತು ಭಾರತದೇಶಗಳ ನಡುವಣ ಸವಿ ಸಂಬಂಧವನ್ನು ಬೆಳೆಸುವದಿಟ್ಟಿನಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ.

ಕುವೈತ್ ಕನ್ನಡ ಕೂಟದ ಧ್ಯೇಯಗಳು: ಕು ಕ ಕೂ ದ ಕೆಲವು ಧ್ಯೇಯಗಳು ಈ ಕೆಳಕಂಡಂತಿವೆ:

* ಕರ್ನಾಟಕದ ಜನ ಕುವೈತ್‌ಗೆ ಬಂದ ಹೊಸತರಲ್ಲಿ ಅವರಿಗೆ ಮೂಲಭೂತ ಸೌಲಭ್ಯ ಒದಗಿಸಿಕೊಡುವುದು

*ಕುವೈತ್‌ನಲ್ಲಿರುವ ಕರ್ನಾಟಕ ರಾಜ್ಯದ ಜನರನ್ನು ಒಟ್ಟುಗೂಡಿಸಿ ಒಂದು ವೇದಿಕೆಯ ಅಡಿ ತರುವುದು

*ಕನ್ನಡ ನಾಡು, ನುಡಿಯ ಮೇಲಿನ ಅಭಿಮಾನವನ್ನು ಹಂಚಿಕೊಳ್ಳುವುದು

*ಕನ್ನಡ ಭಾಷೆ , ಸಾಹಿತ್ಯ , ಕಲೆ , ನೃತ್ಯ , ಸಂಗೀತ ಮಾಧ್ಯಮಗಳಲ್ಲಿ ಅಭಿರುಚಿಯನ್ನು ಕನ್ನಡಿಗರಲ್ಲಿ ಬೆಳೆಸುವುದು, ಹಾಗೂ ಭಾಷಾಭಿಮಾನಿಗಳಾದ, ಕಲಾಭಿಮಾನಿಗಳಾದ ಕನ್ನಡಿಗರಿಗೆ ತಮ್ಮ ಕಲಾಪ್ರತಿಭೆಯನ್ನು ಪ್ರದರ್ಶಿಸಲು ಸದವಕಾಶಗಳನ್ನು ಕಲ್ಪಿಸಿಕೊಡುವುದು

*ಕನ್ನಡನಾಡಿನ ಪ್ರತಿಭಾನ್ವಿತ ಕಲಾವಿದರನ್ನು ಕುವೈತ್ ದೇಶಕ್ಕೆ ಆಮಂತ್ರಿಸಿ ಸನ್ಮಾನಿಸುವುದು: ಈ ದಿಶೆಯಲ್ಲಿ "ಕುಕಕೂ"ವು "ಸುವರ್ಣ ಮಹೋತ್ಸವ"ದ ಅಂಗವಾಗಿ ನವೆಂಬರ್೨೦೦೬ರಲ್ಲಿ ನಡೆಸಿದ "ಕನ್ನಡ ರಾಜ್ಯೋತ್ಸವ" ಕಾರ್ಯಕ್ರಮದ ಸಂದರ್ಭದಲ್ಲಿ ನಾಡೋಜ , ಕವಿ , ಪ್ರೊ॥ ನಿಸ್ಸಾರ್ ಅಹಮದ್ ಅವರನ್ನು ಆಹ್ವಾನಿಸಿ ಸನ್ಮಾನಿಸಿತು. ಮತ್ತು ಮಾರ್ಚ್–೨೦೦೭ ರಲ್ಲಿ ಪ್ರಖ್ಯಾತ ಸಮಾಜಸೇವಕಿ, ಉದ್ಯಮಿ ಶ್ರೀಮತಿ ಸುಧಾ ಮೂರ್ತಿಯವರನ್ನು ಆಮಂತ್ರಿಸಲಾಗಿತ್ತು. ರತ್ನಮಾಲ ಪ್ರಕಾಶ್, ಇವರ ಗಾಯನ ವೃಂದವೂ ಕುಕಕೂದ ಆಹ್ವಾನ ಸ್ವೀಕರಿಸಿ ರಸಸಂಜೆ ಕಾರ್ಯಕ್ರಮ ನಡೆಸಿಕೊಟ್ಟಿತು

*ಕರ್ನಾಟಕದಲ್ಲಿ ಆಚರಿಸಲ್ಪಡುವ ಹಬ್ಬ ಹರಿದಿನಗಳ ಬಗ್ಗೆ ಮಾಹಿತಿ ನೀಡುವುದಲ್ಲದೆ, ಆಚರಣೆಯ ಮೂಲಕ ಅವುಗಳಲ್ಲಿ ಆಸಕ್ತಿ ಹಾಗು ಅಭಿಮಾನ ಮೂಡಿಸುವುದು

*ಕುವೈತ್ ದೇಶದಲ್ಲಿ ಬೆಳೆಯುತ್ತಿರುವ ಕನ್ನಡ ನಾಡಿನ ಮಕ್ಕಳಿಗೆ, ನಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿಯ ಶ್ರೀಮಂತಿಕೆ, ಐತಿಹಾಸಿಕ ಸ್ಥಳಗಳು, ಗಿರಿಶಿಖರಗಳು, ವನ್ಯ ಜೀವಿಗಳು, ಉದ್ಯಾನವನಗಳು, ರಾಜ್ಯದ ಗತವೈಭವ, ನಮ್ಮ ಪರಂಪರೆ, ನೈಸರ್ಗಿಕ ಸೊಬಗು, ಇವೆಲ್ಲವುಗಳ ಬಗ್ಗೆ ವಿಶೇಷ ಜ್ಞಾನ ಪ್ರದಾನ ಮಾಡುವ ಕಾರ್ಯಕ್ರಮಗಳನ್ನು ಮಕ್ಕಳ ಮೂಲಕವೂ ನಡೆಸಿಕೊಡುವುದು ಕುಕಕೂದ ಗುರಿ. ಈ ಉದ್ದೇಶದಿಂದ, ಒಂದು ಕಾರ್ಯಕ್ರಮದಲ್ಲಿ ಸುಮಾರು ೨೦೦ ಮಕ್ಕಳನ್ನು ವೇದಿಕೆಯ ಮೇಲೆ ತಂದಿದೆ ಈ ಕುವೈತ್ ಕನ್ನಡಕೂಟ. ಹೀಗೆ ಮಾಡುವುದರಿಂದ ಮಕ್ಕಳಲ್ಲಿ ನಮ್ಮ ನಾಡು ಹಾಗೂ ನುಡಿಯ ಬಗ್ಗೆ ಅಕ್ಕರೆ, ಅಭಿಮಾನ ಮತ್ತು ಗೌರವ ಹೆಚ್ಚುವುದೆಂಬ ನಂಬಿಕೆ ಕೂಟಕ್ಕಿದೆ. ಇದಲ್ಲದೆ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುವ ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡಿ, ವ್ಯಕ್ತಿತ್ವ ವಿಕಾಸಗೊಳ್ಳುತ್ತದೆ ಎಂಬುದೂ ಒಂದು ಸತ್ಯ.

*ಕುವೈತ್ ದೇಶದಲ್ಲಿ ನೆಲೆಸಿರುವ ಇತರ ಭಾರತೀಯರಿಗೆ ಕರ್ನಾಟಕ ರಾಜ್ಯದ ಸಾಂಸ್ಕೃತಿಕ, ಸಾಹಿತ್ಯಿಕ, ಶೈಕ್ಷಣಿಕ, ಔದ್ಯೋಗಿಕ, ನೈಸರ್ಗಿಕ, ಐತಿಹಾಸಿಕ, ಪಾರಂಪರಿಕ ನಿಗೂಢ ಸಂಪತ್ತಿನ ಪರಿಚಯ ಮಾಡಿಕೊಡುವುದು.

ಮೇಲೆ ಹೇಳಲ್ಪಟ್ಟ ಧ್ಯೇಯಗಳನ್ನು ಕಾರ್ಯಗತ ಮಾಡಲು ಕುಕಕೂ ಅನವರತ ಶ್ರಮಿಸುತ್ತಿದೆ. ಕೂಟದ ಸಫಲತೆಯು ಕೂಟದ ಸದಸ್ಯರ ನಿಸ್ವಾರ್ಥ ಸೇವೆಯ ಮತ್ತು ಬೆಂಬಲದ ಪ್ರತೀಕವಾಗಿದೆ. ಸದಸ್ಯರ ಆಸಕ್ತಿ ಹಾಗು ಕಾರ್ಯಕಾರಿ ಸಮಿತಿಗಳ ಪರಿಶ್ರಮದಿಂದಾಗಿ ಕೂಟವು ಪ್ರತಿವರ್ಷ ಅನೇಕ ಆಟೋಟ ಸ್ಪರ್ಧೆಗಳು, ಹೊರಾಂಗಣ ವಿಹಾರಗಳು, ಸ್ವಾಸ್ಥ್ಯ ಸಂಬಂಧೀ ವಿಷಯ ಗೋಷ್ಠಿಗಳು, ರಕ್ತದಾನ ಶಿಬಿರಗಳೇ ಮುಂತಾದ ಸಾಮಾಜಿಕ ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವಲ್ಲಿ ಯಶಸ್ವಿಯಾಗಿದೆ. ಕೂಟದ

ತ್ರೈಮಾಸಿಕ ಪತ್ರಿಕೆಯಾದ "ಮರಳ ಮಲ್ಲಿಗೆ" ಹಾಗೂ ಮಾಸಿಕ ಪತ್ರಿಕೆಯಾದ "ಈ–ಮಲ್ಲಿಗೆ", ಇವುಗಳು ಕನ್ನಡದ ಬರಹಗಾರರಿಗೆ ಪ್ರೋತ್ಸಾಹ ನೀಡುವ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತಿವೆ, ಅಲ್ಲದೆ ಕನ್ನಡ ನಾಡು ಮತ್ತು ನುಡಿಯಬಗ್ಗೆ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಕಾರ್ಯಭಾರ ಹೊತ್ತಿವೆ.

ಈಗ ಮುಖ್ಯ ವಿಷಯಕ್ಕೆ ಬರೋಣ, ಕುವೈತ್ ಕನ್ನಡ ಕೂಟವು ೨೦೦೯ನೇ ಇಸವಿಯಲ್ಲಿ ೨೫ರ ಹರೆಯಕ್ಕೆ ಬರುತ್ತದೆ. ಆ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮಗಳನ್ನೂ, ಯೋಜನೆಗಳನ್ನೂ ನೆರವೇರಿಸುವ ಉದ್ದೇಶವಿಟ್ಟುಕೊಂಡು ಕಳೆದ ಎರಡು ವರ್ಷಗಳಿಂದ ಕೂಟ ತಯಾರಿ ನಡೆಸುತ್ತಾ ಬಂದಿದೆ. ನಮ್ಮ ಕನ್ನಡನಾಡಿನ ಜನಕ್ಕೆ ಹಾಗೂ ನಮ್ಮ ಸಮಾಜಕ್ಕೆ ಸೇವೆಸಲ್ಲಿಸಲು ಉದ್ದೇಶಿಸಿರುವ ಕೆಲವು ಯೋಜನೆಗಳು ಕೆಳಗಿನಂತಿವೆ:

*ಮಾನವ ಕಲ್ಯಾಣಾರ್ಥವಾಗಿ: ರಕ್ತದಾನ ಶಿಬಿರಗಳನ್ನು ನಡೆಸುವುದು, ದುರ್ಬಲರಿಗೆ ಆದಷ್ಟು ಧನಸಹಾಯ ಮಾಡುವುದು. ಅವಶ್ಯಕತೆ ಇರುವಲ್ಲಿ ಆರೋಗ್ಯಾಲಯದಲ್ಲಿ ರೋಗಿಗಳಿಗಾಗಿ ಕೋಣೆಗಳ ನಿರ್ಮಾಣ ಮತ್ತು / ಅಥವಾ ತುರ್ತುವಾಹನ ಸೌಲಭ್ಯ ಒದಗಿಸುವುದು.

*ಶೈಕ್ಷಣಿಕ ಕ್ಷೇತ್ರದಲ್ಲಿ: ಶಾಲೆಗಳಿಗೆ ಗ್ರಂಥಾಲಯ / ಪುಸ್ತಕಗಳ ನೆರವು ನೀಡುವುದು

ನಿಮಗೆಲ್ಲಾ ತಿಳಿದಿರುವಂತೆ, ಕರ್ನಾಟಕ ರಾಜ್ಯದ "ಸುವರ್ಣಮಹೋತ್ಸವ"ವನ್ನು ೨೦೦೭ರ ದಶಂಬರ್ ಮಾಹೆವರೆಗೂ ಆಚರಿಸಬಹುದು. ಕಳೆದವರ್ಷ ಆರಂಭವಾದ "ಸುವರ್ಣಮಹೋತ್ಸವ"ದ ಅಂಗವಾಗಿ ವಿಜೃಂಭಣೆಯಿಂದ ಆಚರಿಸಲಾದ "ಕನ್ನಡ ರಾಜ್ಯೋತ್ಸವ"ದ ಮೆರುಗನ್ನ ಮತ್ತಷ್ಟು ಹೆಚ್ಚಿಸುವ ಸಲುವಾಗಿ ಕುಕಕೂಟವು ಈ ವರ್ಷದ "ಕನ್ನಡ ರಾಜ್ಯೋತ್ಸವ"ವನ್ನು "ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ" ಎಂಬುದಾಗಿ ಆಚರಿಸಬೇಕೆಂದು ನಿರ್ಧರಿಸಿದೆ, ಈ ಸಮಾರಂಭವನ್ನು ೨೦೦೭ರ ನವಂಬರ್ ೩೦ರಂದು ಮತ್ತು ಡಿಸೆಂಬರ್ ೧ನೇ ದಿನಾಂಕಗಳಂದು( ಎರಡೂ ದಿನಗಳು) ಆಚರಿಸಲು ನಿಶ್ಚಯಗೊಳಿಸಿದೆ. ಕಾರ್ಯಕ್ರಮವು ನಾಲ್ಕು ಭಾಗಗಳಲ್ಲಿ ಜರುಗಲಿದೆ.

"ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ–ಕುವೈತ್–೨೦೦೭" ರ ಉದ್ದೇಶ / ಧ್ಯೇಯಗಳು :

ಹೊರದೇಶಗಳಲ್ಲಿ ನೆಲೆಸಿರುವ ಕನ್ನಡ ಜನ ಹಾಗು ಅವರ ಕುಟುಂಬಗಳು ತಮ್ಮ ನೆಲ, ಜಲದ ಸಂಪರ್ಕದಿಂದ ವಂಚಿತರಾಗಿರುತ್ತಾರೆ. ಇಂತಹ ಅನಿವಾಸಿ ಕನ್ನಡದ ಜನರು ಕನ್ನಡ ಸಾಹಿತ್ಯ, ಕಲೆ, ನೃತ್ಯ ಗಳಿಂದ ಭೌಗೋಳಿಕವಾಗಿ ದೂರವಾಗಿರುತ್ತಾರೆ. ಈ ಅಂತರವು ಜನರಲ್ಲಿ , ವಿಶೇಷವಾಗಿ ಮಕ್ಕಳಲ್ಲಿ ನಮ್ಮ ರಾಜ್ಯದ ಭವ್ಯ ಪರಂಪರೆಯ ಪರಿಚಯ ಮಾಸಿಹೋಗುವಂತೆ ಮಾಡುತ್ತದೆ. ನಮ್ಮ ಸಂಸ್ಕೃತಿಯ ಅರಿವು ಕ್ಷೀಣಿಸಿದರೆ ಆಸಕ್ತಿಯೂ ಕುಂದುತ್ತದೆ. ನಮ್ಮ ನಾಡಿನ ಸಂಸ್ಕೃತಿ ನಮ್ಮ ಜನಮನಗಳಿಂದಲೇ ಅಳಿಸಿಹೋಗುವುದನ್ನ ತಡೆಯಲು, ಪರದೇಶವಾಸಿಗಳಲ್ಲಿಯೂ ತಮ್ಮ ತನವನ್ನು ಉಳಿಸಿ, ಬೆಳೆಸುವ ಉದ್ದೇಶದಿಂದ ಈ

ಸಮ್ಮೇಳನವನ್ನ ಹಮ್ಮಿಕೊಳ್ಳಲಾಗಿದೆ. "ಭಾರಿಸು ಕನ್ನಡ ಡಿಂಢಿಮವ...." ಎಂಬ ಕವಿಯೋಕ್ತಿಗೆ ಅನುಗುಣವಾಗಿ ಕುಕ ಕೂಟವು ಈ ಸಮ್ಮೇಳನವನ್ನ ಆಚರಿಸಲಿದೆ.

ಈ ಅಂಗವಾಗಿ, ಸಾಹಿತ್ಯಕ್ಷೇತ್ರಕ್ಕೆ ಸಂಬಂಧಪಟ್ಟ ಕವಿಗೋಷ್ಟಿ, ಹಾಸ್ಯ ಗೋಷ್ಟಿ, ಮಾಧ್ಯಮ ಗೋಷ್ಟಿ ಹಾಗು ಅನಿವಾಸಿ ಕನ್ನಡಿಗರ ಗೋಷ್ಟಿಗಳು ನಡೆಯಲಿವೆ. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಭರತನಾಟ್ಯ, ಜಾನಪದ ನೃತ್ಯ, ಯಕ್ಷಗಾನ ಮತ್ತು ನೃತ್ಯರೂಪಕಗಳು ಪ್ರದರ್ಶನಗೊಳ್ಳಲಿವೆ. ಈ ಕಾರ್ಯಕ್ರಮಗಳು ಕನ್ನಡ ನೆಲದ ಹೆಸರಾಂತ ಸಾಂಸ್ಕೃತಿಕ ಸಂಘಸಂಸ್ಥೆಗಳಿಂದ ಮತ್ತು ಕಲಾನಿಷ್ಣಾತರಿಂದ ನಡೆಸಿಕೊಡಲ್ಪಡುತ್ತವೆ. ವಾಣಿಜ್ಯ ಮತ್ತು ಕಲಾಕ್ಷೇತ್ರಕ್ಕೆ ಸಂಬಂಧಿಸಿದ ವಸ್ತುಪ್ರದರ್ಶನ, ಚಿತ್ರಕಲಾ ಪ್ರದರ್ಶನ, ಪುಸ್ತಕ ಪ್ರದರ್ಶನ / ಮೇಳ ಇವು ಈ ಕಾರ್ಯಕ್ರಮದ ವಿಶೇಷಭಾಗಗಳಾಗಿರುತ್ತವೆ.

೧೦೦ ಕ್ಕೂ ಮಿಕ್ಕಿದ ಅನಿವಾಸಿ ಕನ್ನಡಿಗರ ನಿಯೋಗವು ಇತರ ಕೊಲ್ಲಿ ರಾಷ್ಟ್ರಗಳಾದ ಕತಾರ್, ಬಹರೆನ್, ಅಬುಧಾಬಿ, ದುಬೈ, ಶಾರ್ಜ ಮತ್ತು ಮಸ್ಕತ್‌ಗಳಿಂದ ಬರುವುದಿದೆ. ಅಲ್ಲದೆ ಸಿಂಗಾಪುರ್, ಇಂಗ್ಲೆಂಡ್, ಅಮೆರಿಕ ಹಾಗೂ ಕೆನ್ಯಾ ದೇಶಗಳ ಕನ್ನಡ ಸಂಘದ ಸದಸ್ಯರೂ ಸೇರಿ ಸುಮಾರು ೫ ಸಾವಿರ ಜನರು ಸೇರುವ ನಿರೀಕ್ಷೆ ಇದೆ.

ಈ ಸದುದ್ದೇಶವಿಟ್ಟುಕೊಂಡು ಸಮ್ಮೇಳನವನ್ನು ಹಮ್ಮಿಕೊಂಡಿರುವ "ಕುವೈತ್ ಕನ್ನಡ ಕೂಟ"ಕ್ಕೆ ಸಹಕಾರಿಯಾಗಿ ನಿಂತು, ಕನ್ನಡಿಗರ ಸೇವೆಗೆ ಸಜ್ಜಾಗಿರುವ ಒಂದು ಪತ್ರಿಕೋದ್ಯಮವೇ "ಹೃದಯ ವಾಹಿನಿ". ಈ ವಿಶೇಷ ಕಾರ್ಯಕ್ರಮ ಯಶಸ್ವಿಯಾಗಿ ಜರುಗುವಲ್ಲಿ ಕರ್ನಾಟಕದ ಪತ್ರಕರ್ತರ ಪಾತ್ರ ತುಂಬಾ ಪ್ರಮುಖವಾದುದು. ಕುಕಕೂಟವು ಪತ್ರಿಕೋದ್ಯಮದ ಹಾಗೂ ಪತ್ರಕರ್ತರ ವಿಶೇಷ ಸಹಕಾರ ಮತ್ತು ಸಹಾಯವನ್ನ ಆಶಿಸುತ್ತಿದೆ. ನಮ್ಮ ನಿರೀಕ್ಷೆಯನ್ನು ನೀವು ಹುಸಿಯಾಗಿಸುವುದಿಲ್ಲವೆಂಬ ಭರವಸೆ ನಮ್ಮಲ್ಲಿದೆ.

ಸಿರಿಗನ್ನಡಂ ಗೆಲ್ಗೆ